# ಕರ್ನಾಟಕ ಸರ್ಕಾರ

## ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು

**2021-22ನೇ ಸಾಲಿನ**

## ವಾರ್ಷಿಕ ವರದಿ




ಶ್ರೀಮತಿ ಪೂರ್ಣಿಮಾ.ಬಿ.ಆರ್., ಭಾ.ಆ.ಸೇ.
ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ,
ದೊಡ್ಡಕೆರೆ ಮೈದಾನ, ಮೈಸೂರು- 570010

# ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು.

1. **ಪ್ರಾಸ್ತಾವಿಕ:**

1885ರಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಜೊತೆ 2004ರಲ್ಲಿ ಅಸ್ತಿತ್ವಕ್ಕೆ ಬಂದ ಪರಂಪರೆ ಇಲಾಖೆಯನ್ನು ಸರ್ಕಾರಿ ಆದೇಶದ ಸಂಖ್ಯೆ: ಕಸಂವಾಪ್ರ 10 ಕೆಎಂಯು 2012 ದಿನಾಂಕ 23-2-2012ರಲ್ಲಿ ವಿಲೀನಗೊಳಿಸಿ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುನರ್ ರಚಿಸಿ ಆಯುಕ್ತರನ್ನು ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 234 ಕೆಎಂಯು 2014 ದಿನಾಂಕ 13.03.2015ರಲ್ಲಿ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ (Archaeology, Museums and Heritage Department) ಎಂದು ಮರು ನಾಮಕರಣ ಮಾಡಿ ಆದೇಶಿಸಿದೆ.

ಪ್ರಸ್ತುತ ಇಲಾಖೆಯ ಕೇಂದ್ರ ಕಛೇರಿಯು ಮೈಸೂರಿನಲ್ಲಿದ್ದು ಕಲೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಯೋಜನೆ ಶೀರ್ಷಿಕೆ ಅಡಿಯಲ್ಲಿ ಇಲಾಖೆಯ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

**2. ಇಲಾಖೆಯ ಧ್ಯೇಯೋದ್ದೇಶಗಳು:**

ಈ ಇಲಾಖೆಯ ಮೂಲಭೂತ ಕಾರ್ಯ ಚಟುವಟಿಕೆಗಳೆಂದರೆ ಅನ್ವೇಷಣೆ, ಉತ್ಖನನ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಶಾಸನಗಳ ಸರ್ವೇಕ್ಷಣೆ, ಪ್ರಾಚೀನ ನಾಣ್ಯಗಳ ಅಧ್ಯಯನ, ಸಂಶೋಧನಾ ಗ್ರಂಥಗಳ ಪ್ರಕಟಣೆ, ವಸ್ತುಸಂಗ್ರಹಾಲಯಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಮತ್ತು ಪರಂಪರೆ ಕಾರ್ಯ ಚಟುವಟಿಕೆಗಳು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ ಹಾಗೂ ಅವಜ್ಞತೆಗೆ ತುತ್ತಾಗಿರುವ ಅಮೂಲ್ಯವಾದ ಪುರಾತನ ಶಿಲ್ಪಗಳು, ಪ್ರಾಚೀನ ಶಿಲಾಶಾಸನಗಳು, ನಾಣ್ಯಗಳು, ತಾಮ್ರ ಪಟಗಳು ಮುಂತಾದವುಗಳನ್ನು ಇಲಾಖೆಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ ಹಾಗೂ ಸಾರ್ವಜನಿಕ ವೀಕ್ಷಣೆಗೆ ತೆರೆದಿಡುವ ಜವಾಬ್ದಾರಿಯನ್ನು ಸಹ ಇಲಾಖೆಯು ನಿರ್ವಹಿಸುತ್ತಿದೆ.

ಐತಿಹಾಸಿಕ ಹಿನ್ನೆಲೆಯುಳ್ಳ ಮೈಸೂರು, ಶ್ರೀರಂಗಪಟ್ಟಣ, ಬೀದರ್, ಕಲಬುರಗಿ, ಬಿಜಾಪುರ ಹಾಗೂ ಕಿತ್ತೂರು ಸೇರಿದಂತೆ ಒಟ್ಟು ಆರು ಸ್ಥಳಗಳನ್ನು 2004ರಲ್ಲಿ ಮತ್ತು 2012-13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ನತಿ, ನಾಗಾವಿ, ಕಮ್ಮಟಗಿ, ಬಾದಾಮಿ, ಐಹೊಳೆ, ಬೆಂಗಳೂರು, ಲಕ್ಕುಂಡಿ, ಬನವಾಸಿ, ತಲಕಾಡು, ಬಳ್ಳಿಗಾವಿ, ಬೇಲೂರು, ಹಳೇಬೀಡು, ಮಳಖೇಡ, ಮೇಲುಕೋಟೆ ಸೇರಿದಂತೆ ಹದಿನಾಲ್ಕು ಪ್ರದೇಶಗಳನ್ನು ಪಾರಂಪರಿಕ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಪ್ರಸ್ತುತ 20 ಪಾರಂಪರಿಕ ಪ್ರದೇಶಗಳಿದ್ದು ಅವುಗಳಲ್ಲಿರುವ ಸ್ಮಾರಕಗಳ, ಕಟ್ಟಡಗಳ ಇನ್‌ವೆಂಟರಿ ತಯಾರಿಸಿ, ಸಮಗ್ರ ಅಭಿವೃದ್ಧಿ ಯೋಜನೆಯಂತೆ ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳುತ್ತಿದೆ.

ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ 5 ಉಪನಿರ್ದೇಶಕರ ಕಛೇರಿಗಳಿದ್ದು ಇವುಗಳು ಮೈಸೂರು, (ಪರಂಪರೆ) ಕಲಬುರಗಿ, ಬೆಂಗಳೂರು, ಧಾರವಾಡ ಹಾಗೂ ಕಮಲಾಪುರ (ಹಂಪಿ)ಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಶ್ರೀರಂಗಪಟ್ಟಣ,

ಯಳಂದೂರು, ಹಾಸನ, ಮಡಿಕೇರಿ, ಮಂಗಳೂರು, ಕಿತ್ತೂರು, ಗದಗ, ಕಲಬುರಗಿ, ರಾಯಚೂರು, ಹೂವಿನಹಡಗಲಿ, ಬಸವಕಲ್ಯಾಣ ಮತ್ತು ಅಥಣಿ (ಶಿಲ್ಪಕಲಾ ಗ್ಯಾಲರಿ) ಸೇರಿದಂತೆ ಒಟ್ಟು ಹದಿನಾರು ಸರ್ಕಾರಿ ಸಂಗ್ರಹಾಲಯಗಳು ಮತ್ತು ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆ ಕಲಾ ಗ್ಯಾಲರಿ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ.

## 3. ಸಿಬ್ಬಂದಿಯ ವಿವರಗಳು:

| ಹುದ್ದೆಗಳ ಸಮೂಹ | ಮಂಜೂರಾಗಿರುವ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಪುರುಷರು | ಮಹಿಳೆಯರು | ಖಾಲಿಯಿರುವ ಹುದ್ದೆಗಳ ಸಂಖ್ಯೆ |
|---|---|---|---|---|---|
| ಎ | 12 | 05 | 04 | 01 | 07 |
| ಬಿ | 08 | 06 | 04 | 02 | 02 |
| ಸಿ | 83 | 39 | 27 | 12 | 44 |
| ಡಿ | 116 | 29 | 20 | 09 | 87 |
| **ಒಟ್ಟು** | **219** | **79** | **55** | **24** | **140** |

## 4. ವೃಂದ ಮತ್ತು ನೇಮಕಾತಿ ನಿಯಮಗಳು:

ಪುರಾತತ್ವ ಮತ್ತು ಸಂಗ್ರಹಾಲಯಗಳ ಇಲಾಖೆಗೆ ಸರ್ಕಾರದ ಆದೇಶ ಸಂಖ್ಯೆ:ಐಟಿವೈ:67: ಕೆಎಂಯು: 86 ದಿನಾಂಕ 28-2-1992ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿತ್ತು. ಪ್ರಸ್ತುತ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಪುನರ್ ರಚನೆ ಕುರಿತಂತೆ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಪ್ರಸ್ತಾವನೆಯು ಪರಿಶೀಲನೆಯಲ್ಲಿರುತ್ತದೆ.

## 5. ಕಾಯ್ದೆ ಮತ್ತು ನಿಯಮಗಳು:

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕೆಳಕಂಡ ಕಾಯ್ದೆ ಮತ್ತು ನಿಯಮಗಳನ್ನು ಹೊಂದಿರುತ್ತದೆ.

1) ಕರ್ನಾಟಕ ಪ್ರಾಚೀನ ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ 1961 ಮತ್ತು ನಿಯಮಗಳು 1965.
2) ಕರ್ನಾಟಕ ಗುಪ್ತನಿಧಿ ಕಾಯ್ದೆ 1962 ಮತ್ತು ನಿಯಮಗಳು 1963.

## 6. ಸಾರ್ವಜನಿಕ ಕುಂದು ಕೊರತೆಗಳು:

ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಕುರಿತಂತೆ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸ್ಮಾರಕಗಳ ಸಂರಕ್ಷಣೆಗಾಗಿ ಮನವಿಗಳು ಬರುತ್ತಿದ್ದು ಅವುಗಳನ್ನು ಆದ್ಯತೆಯ ಮೇರೆಗೆ ಇಲಾಖೆಯಲ್ಲಿ ಲಭ್ಯವಿರುವ ಅನುದಾನವನ್ನು ಗಮನದಲ್ಲಿರಿಸಿಕೊಂಡು ಸಂರಕ್ಷಣಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

7. **ಇಲಾಖೆಯ ಪಿ.ಡಿ.ಖಾತೆ** :

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರ ವೈಯಕ್ತಿಕ ಠೇವಣಿ ಖಾತೆಯ ಸಂಖ್ಯೆ:೦೬೦೦೦೦೦೧ನ್ನು ಉಪ ನಿರ್ದೇಶಕರು, ಜಿಲ್ಲಾ ಖಜಾನೆ ಮೈಸೂರುರವರ ಪತ್ರದ ದಿನಾಂಕ:30.10.2019ರನ್ವಯ ಖಜಾನೆ-2ಕ್ಕೆ ದಿನಾಂಕ:21.11.2019ರಂದು ಮೈಗ್ರೇಟ್ ಮಾಡಲಾಗಿದೆ.

ಖಜಾನೆಯಲ್ಲಿರುವ ಇಲಾಖೆಯ ಪಿಡಿ ಖಾತೆ ಸಂಖ್ಯೆ.27577A028ನ್ನು ದಿನಾಂಕ:01.04.2021 ರಿಂದ 31.03.2022 ರವರೆಗೆ ಮುಂದುವರೆಸಲು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಆಇ 33 ಟಿಎಆರ್ 2021 ದಿನಾಂಕ:15.07.2021ರಲ್ಲಿ ಮಂಜೂರಾತಿ ನೀಡಿರುತ್ತಾರೆ.

ಅದರಂತೆ ಪ್ರಸಕ್ತ ಸಾಲಿನ ಪ್ರಾರಂಭಿಕ ಠೇವಣಿಯಾಗಿ ರೂ.13,46,51,979/-ಗಳಿರುತ್ತದೆ ಹಾಗೂ 2021-22ನೇ ಸಾಲಿನ ಜನವರಿ-2022ರ ಮಾಹೆಯ ಅಂತ್ಯಕ್ಕೆ ವಿವಿಧ ಇಲಾಖೆಗಳಿಂದ ರೂ.40565101/-ಗಳ ಅನುದಾನ ಬಿಡುಗಡೆಯಾಗಿದ್ದು, ಜನವರಿ-2022ರ ಮಾಹೆಯ ಅಂತ್ಯಕ್ಕೆ ಒಟ್ಟು ರೂ. **5,29,46,483**/-ಗಳ ಅನುದಾನವನ್ನು ಈ ಕೆಳಕಂಡ ಸಂರಕ್ಷಣಾ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ವೆಚ್ಚ ಮಾಡಲಾಗಿದೆ. ವಿವರ ಇಂತಿದೆ.

| ಕ್ರ.ಸಂ | ಕಾಮಗಾರಿಗಳ ವಿವರ | 2021-22ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| 1 | ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕಿನ ಬಿಆರ್‌ಹಿಲ್ಸ್ ನಲ್ಲಿರುವ ಶ್ರೀ ಬಿಳಿಗಿರಿ ರಂಗನಾಥಸ್ವಾಮಿ ದೇವಸ್ಥಾನಕ್ಕೆ ನೆಲಹಾಸು ಅಳವಡಿಸುವ ಕೆಲಸ. | 4975000 |
| 2 | ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕಿನ ಹೊಸಹೊಳಲು ಗ್ರಾಮದಲ್ಲಿರುವ ಶ್ರೀ ಕೋಟೆ ಭೈರವೇಶ್ವರ ದೇವಸ್ಥಾನದ ಅಭಿವೃದ್ಧಿ ಕೆಲಸ. | 5572000 |
| 3 | ಮೈಸೂರು ಜಿಲ್ಲೆ, ಮೈಸೂರು ಅರಮನೆ ಆವರಣದಲ್ಲಿರುವ ಶ್ರೀ ತ್ರಿನೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 1050000 |
| 4 | ಮೈಸೂರಿನ ಅರಮನೆ ಆವರಣದಲ್ಲಿರುವ ಶ್ರೀ ಪ್ರಸನ್ನ ಕೃಷ್ಣ ದೇವಸ್ಥಾನದ ಸಂರಕ್ಷಣಾ ಕೆಲಸ. | 700000 |
| 5 | ಮೈಸೂರು ಅರಮನೆಯ ಮುಂಭಾಗದ ಸಮೀಪದಲ್ಲಿರುವ ಶ್ರೀ ಕೋಟೆ ಮಾರಮ್ಮ ದೇವಸ್ಥಾನದ ಸಂರಕ್ಷಣಾ ಕೆಲಸ. | 180840 |
| 6 | ಹಾಸನ ಜಿಲ್ಲೆ, ಹೊಳೆ ನರಸೀಪುರ ತಾಲ್ಲೂಕು, ಹೊಳೆ ನರಸೀಪುರದಲ್ಲಿರುವ ಶ್ರೀ ಕೋಟೆ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಸಂರಕ್ಷಣಾ ಕೆಲಸ. | 7462500 |
| 7 | ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು ಶ್ರೀರಂಗಪಟ್ಟಣದಲ್ಲಿರುವ ವೆಸ್ಲಿ ಸೇತುವೆಯ ಸಂರಕ್ಷಣಾ ಕಾಮಗಾರಿ. | 1731300 |
| 8 | ಬೆಂಗಳೂರು ಅರಮನೆ ರಸ್ತೆಯಲ್ಲಿರುವ ಮುಖ್ಯ ಪೋಸ್ಟ್‌ಮಾಸ್ಟರ್ ಜನರಲ್ (ಕರ್ನಾಟಕ ಸರ್ಕಲ್) ಕಟ್ಟಡದ ಸಂರಕ್ಷಣೆ .(ಜೈನ್ ವಿಶ್ವವಿದ್ಯಾಲಯದ ಪಕ್ಕದಲ್ಲಿರುವ ಮಹಾರಾಣಿ ಕಾಲೇಜಿನ ಎದುರು) | 1334177 |
| 9 | ದಕ್ಷಿಣಕನ್ನಡ ಜಿಲ್ಲೆ, ಮಂಗಳೂರು ನಗರ ಬೋಳಾರೆ ಲೆವೆಲ್ ಜಂಕ್ಷನ್‌ನಲ್ಲಿರುವ ಪ್ರಾಚೀನ ಬಾವಿಯ ಸಂರಕ್ಷಣೆ. | 229761 |
| 10 | ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಚಿದ್ರವಳ್ಳಿ ಗ್ರಾಮದಲ್ಲಿರುವ ಶ್ರೀ ಸಿದ್ದೇಶ್ವರ ದೇವಸ್ಥಾನದ ಸಂರಕ್ಷಣೆ. | 4975000 |
| 11 | ಮೈಸೂರು ಜಿಲ್ಲೆ, ಮೈಸೂರು ಅರಮನೆ ಆವರಣದಲ್ಲಿರುವ ಶ್ರೀ ಭುವನೇಶ್ವರಿ | 256775 |

| | | |
|---|---|---|
| | ದೇವಸ್ಥಾನದ ಸಂರಕ್ಷಣೆ. | |
| 12 | ವಾರ್ಡ್ ನಂ.51, ಹರಿಚಂದ್ರ ರಸ್ತೆ, ಮೈಸೂರು ನಗರ, ಮೈಸೂರು ನಲ್ಲಿ ಬೈರವೇಶ್ವರ ಸ್ವಾಮಿ (ಕಾಲಭೈರವೇಶ್ವರ ಸ್ವಾಮಿ) ದೇವಾಲಯದ ಸಂರಕ್ಷಣೆ. | 392182 |
| 13 | ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲ ತಾಲ್ಲೂಕಿನ ಶಿವಸಮುದ್ರದಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಾಲಯದ (ಮಧ್ಯರಂಗ) ಸಂರಕ್ಷಣೆ. | 10474103 |
| 14 | ಮೈಸೂರು ಜಿಲ್ಲೆ, ಅರಮನೆ ಆವರಣದಲ್ಲಿರುವ ಶ್ರೀ ಗಾಯತ್ರಿ ದೇವಸ್ಥಾನದ ಸಂರಕ್ಷಣಾ ಕೆಲಸ. | 2000000 |
| 15 | ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಬೈಲಹೊಂಗಲದಲ್ಲಿರುವ ಕಿತ್ತೂರು ರಾಣಿ ಚನ್ನಮ್ಮನ ಸಮಾಧಿಯ ಸಂರಕ್ಷಣೆ. | 142515 |
| 16 | ಕಲ್ಬುರ್ಗಿ ಜಿಲ್ಲೆ, ಸೇಡಂ ತಾಲ್ಲೂಕು, ಮಲಖೇಡ ಗ್ರಾಮದಲ್ಲಿ ಮಲಖೇಡ ಕೋಟೆಯ ಸಂರಕ್ಷಣಾ ಕೆಲಸ. | 10000000 |
| 17 | ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿಯಲ್ಲಿರುವ ಶ್ರೀ ಬ್ರಹ್ಮೇಶ್ವರ ದೇವಸ್ಥಾನ ಸಂರಕ್ಷಣೆ. | 1470330 |
| | **ಒಟ್ಟು ಮೊತ್ತ** | **52946483** |

## 8. ಆಯವ್ಯಯ: ರೂ.ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ಯೋಜನಾ ಲೆಕ್ಕಶೀರ್ಷಿಕೆ | 2021-22ನೇ ಸಾಲಿಗೆ ನಿಗಧಿಪಡಿಸಿರುವ ಅನುದಾನ | 2021-22ನೇ ಜನವರಿ-2022ರ ಅಂತ್ಯಕ್ಕೆ ಬಿಡುಗಡೆಯಾಗಿರುವ ಅನುದಾನ | 2021-22ನೇ ಸಾಲಿನ ಜನವರಿ-2022ರ ಅಂತ್ಯಕ್ಕೆ ಕೈಗೊಳ್ಳಲಾದ ವೆಚ್ಚ | ಶೇಕಡವಾರು ಬಿಡುಗಡೆಯಾಗಿರುವ ಅನುದಾನಕ್ಕೆ ಅನುಗುಣವಾಗಿ |
|---|---|---|---|---|---|
| 1 | 2205-00-102-0-78 ಸಹ್ಯಾದ್ರಿ ಸಂಸ್ಕೃತಿ ಅಭಿವೃದ್ಧಿ ಪ್ರಾಧಿಕಾರ | 32.00 | 25.75 | 2575000 | 100% |
| 2 | 2205-00-102-0-79 ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ | 1.00 | 0.50 | 50000 | 100% |
| 3 | 2205-00-102-1-92 ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ | 1.00 | 0.25 | 25000 | 100% |
| 4 | 2205-00-103-0-01 ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ | 816.00 | 677.75 | 50585924 | 75% |
| 5 | 2205-00-103-0-18 ಹಂಪಿ ಅಭಿವೃದ್ಧಿ ಪ್ರಾಧಿಕಾರ | 47.00 | 35.25 | 3525000 | 100% |
| 6 | 2205-00-103-0-21 ಪರಂಪರೆ ಆಯುಕ್ತರು | 993.20 | 645.60 | 40910185 | 63.36% |
| 7 | 2205-00-103-0-25 ಸಂಸ್ಕೃತಿ ಸಂಗ್ರಹಾಲಯ | 38.00 | 19.00 | 1472997 | 78% |

| | | | | | |
|---|---|---|---|---|---|
| ೮ | 2205-00-107-0-01 ವಸ್ತುಸಂಗ್ರಹಾಲಯದ ಅಭಿವೃದ್ಧಿ | 425.00 | 306.50 | 20390092 | 67% |
| ೯ | 4202-04-101-0-02 (ಬಂಡವಾಳ ವೆಚ್ಚ) ಪುರಾತತ್ವ ಮತ್ತು ವಸ್ತು ಸಂಗ್ರಹಾಲಯಗ ಳು | 500.00 | 125.00 | 10691549 | 86% |
| **ಒಟ್ಟು ಮೊತ್ತ** | | **2853.20** | **1575.60** | **115631068** | **77%** |

### 9. ಮುಂದುವರೆದ ಯೋಜನಾ ಕಾರ್ಯಕ್ರಮ:

2021-22ನೇ ಸಾಲಿಗೆ ಯೋಜನೆ ಬಾಬ್ತಿನಡಿಯಲ್ಲಿ ರೂ.2853.20ಲಕ್ಷ ಅನುದಾನವನ್ನು ಕಲ್ಪಿಸಲಾಗಿದ್ದು, ಇದಕ್ಕೆ ಸರ್ಕಾರದ ಆದೇಶದ ಸಂಖ್ಯೆ:ಟಿಓಆರ್ 60 ಟಿಡಿಎ 2021, ಬೆಂಗಳೂರು ದಿನಾಂಕ:05.08.2021ರಲ್ಲಿ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ದೊರೆತಿದೆ.

ಪ್ರಸಕ್ತ ಸಾಲಿನಲ್ಲಿ ಬಿಡುಗಡೆಯಾಗಿರುವ ಮೊತ್ತ ರೂ.1575.60 ಲಕ್ಷಗಳಲ್ಲಿ ಜನವರಿ-2022ರ ಮಾಹೆಯ ಅಂತ್ಯಕ್ಕೆ ರೂ.1156.31 ಲಕ್ಷಗಳ ವೆಚ್ಚ ಮಾಡಲಾಗಿದ್ದು, ಶೇ.77% ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

### 10. ಸಂರಕ್ಷಣಾ ಕಾಮಗಾರಿ :

ಇಲಾಖೆಯ ವತಿಯಿಂದ ವಿವಿಧ ಲೆಕ್ಕಶೀರ್ಷಿಕೆಯಡಿ ಸ್ಮಾರಕಗಳ ಸಂರಕ್ಷಣೆ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದಿಂದ ಅನುಮೋದನೆಯನ್ನು ಪಡೆದು, ಅದರನ್ವಯ ಸಿದ್ಧಪಡಿಸಿದ ಅಂದಾಜುಪಟ್ಟಿಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ಆಯುಕ್ತರ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿ ರಚಿತವಾಗಿರುವ ತಾಂತ್ರಿಕ ಸಲಹಾ ಸಮಿತಿಯಿಂದ ಪಡೆದು ಇ-ಟೆಂಡರ್ ಮೂಲಕ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

**2205-00-103-0-01-059 ಇತರೆ ಖರ್ಚುಗಳು**

| ಕ್ರ.ಸಂ | ಕಾಮಗಾರಿಗಳ ವಿವರ | 2021-22ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| I | **ಮುಂದುವರೆದ ಕಾಮಗಾರಿಗಳು** | |
| 1 | ಬೆಂಗಳೂರು ನಗರ ಗವಿಪುರದಲ್ಲಿರುವ, ಶ್ರೀ ಗವಿಗಂಗಾದರೇಶ್ವರ ದೇವಸ್ಥಾನಕ್ಕೆ ಕುಸಿದ ರಕ್ಷಣಾ ಗೋಡೆಯ ಸಂರಕ್ಷಣೆ. | 279754 |
| 2 | ಖಾಸಗಿ ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಕೈಗೊಂಡಿರುವ 16ನೇ ಹಂತದ 12 ಸಂರಕ್ಷಣಾ ಕಾಮಗಾರಿಗಳನ್ನು ಧರ್ಮಸ್ಥಳ ಮಂಜುನಾಥೇಶ್ವರ ಟ್ರಸ್ಟ್ ವತಿಯಿಂದ ಅನುಷ್ಠಾನಗೊಳಿಸಲು ಸರ್ಕಾರದ ವಂತಿಕೆ | 5150000 |
| 3 | ಇಲಾಖೆಯ ಸಂರಕ್ಷಣಾ ಕಾಮಗಾರಿಯ ಟೆಂಡರ್ ಪ್ರಕಟಣೆ ಬಾಬ್ತು | 284328 |

| | | |
|---|---|---|
| 4 | ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು, ಕಿಕ್ಕೇರಿಯಲ್ಲಿರುವ ಶ್ರೀ ಬ್ರಹ್ಮೇಶ್ವರ ದೇವಾಲಯದ ಸಿಸಿಟಿವಿ ಅಳವಡಿಸುವ ಕೆಲಸ. | 76535 |
| 5 | ಹಾವೇರಿ ಜಿಲ್ಲೆಯ ಸವಣೂರು ಪಟ್ಟಣದಲ್ಲಿ ಸವಣೂರು ನವಾಬ್ಸ್ (ಹೆರಿಟೇಜ್) ಕಟ್ಟಡಕ್ಕೆ ವಿದ್ಯುದ್ದೀಕರಣವನ್ನು ಒದಗಿಸುವುದು. | 78767 |
| 6 | ಚಿಕ್ಕಮಗಳೂರು ಜಿಲ್ಲೆ, ಮತ್ತು ತಾಲ್ಲೂಕು ಬೀಕನಹಳ್ಳಿಯಲ್ಲಿರುವ ಶ್ರೀ ಸಿದೇಶ್ವರ ದೇವಸ್ಥಾನದ ಸಂರಕ್ಷಣೆ. | 828076 |

**ಲೆಕ್ಕಶೀರ್ಷಿಕೆ: 2205-00-103-0-21 ಪರಂಪರೆ ಆಯುಕ್ತರು**

| ಕ್ರ.ಸಂ | ಕಾಮಗಾರಿಗಳ ವಿವರ | 2021-22-ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| 1 | ಕಲ್ಬುರ್ಗಿ ವಿಭಾಗದ ಸಂರಕ್ಷಿತ ಸ್ಮಾರಕಗಳ 3D ಲೇಸರ್ ಸ್ಕ್ಯಾನಿಂಗ್ ಮತ್ತು ಜಿಯೋ-ಸ್ಪೇಷಿಯಲ್ ತಂತ್ರಜ್ಞಾನಗಳನ್ನು ಬಳಸಿಕೊಂಡು ಡಿಜಿಟಲ್ ದಾಖಲೀಕರಣ ಕಾರ್ಯಕ್ಕಾಗಿ. | 1258506 |
| 2 | ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀರಂಗಪಟ್ಟಣ ಧ್ವಜಸ್ತಂಭದ ಸುತ್ತಲೂ ಅಭಿವೃದ್ಧಿ ಕಾಮಗಾರಿ. | 46692 |
| 3 | ಬಳ್ಳಾರಿ ಜಿಲ್ಲೆ, ಹೂವಿನಡಗಲಿ ತಾಲ್ಲೂಕಿನ ಹೂವಿನಡಗಲಿಯಲ್ಲಿ ಸರ್ಕಾರಿ ಅಭಿವೃದ್ಧಿ ಕಾಮಗಾರಿ. | 48645 |
| 4 | ಹಾಸನ ಜಿಲ್ಲೆ ಮತ್ತು ತಾಲ್ಲೂಕು ಹೊನ್ನಾವರದ ಕೇಶವ ದೇವಸ್ಥಾನಕ್ಕೆ ಚೈನ್ ಲಿಂಕ್ ಫೆನ್ಸಿಂಗ್ ಅಳವಡಿಸುವ ಕೆಲಸ. | 1145887 |
| 5 | ಗದಗ ಜಿಲ್ಲೆ, ಗದಗ ಟೌನ್, ಸರ್ಕಾರಿ ವಸ್ತುಸಂಗ್ರಹಾಲಯ ಉದ್ಯಾನವನದ ನಿರ್ವಹಣೆ. | 270874 |
| 6 | ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಕೆರೆಯಲ್ಲಿರುವ ಶ್ರೀ ಯೋಗಮಾದ ದೇವಸ್ಥಾನಕ್ಕೆ ಚೈನ್ ಲಿಂಕ್ ಬೇಲಿಯನ್ನು ಅಳವಡಿಸುವ ಕೆಲಸ. | 525104 |
| 7 | ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ವಿಘ್ನಸಂತೆಯಲ್ಲಿರುವ ಶ್ರೀ ಲಕ್ಷ್ಮೀ ನರಸಿಂಹ ದೇವಾಲಯದ ಸಂರಕ್ಷಣಾ ಕೆಲಸ. | 431247 |
| 8 | ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನಲ್ಲಿರುವ ಶ್ರೀ ಚನ್ನಕೇಶವ ದೇವಸ್ಥಾನಕ್ಕೆ ಉದ್ಯಾನವನದ ನಿರ್ವಹಣೆ. | 97708 |
| 9 | ಗದಗ ಜಿಲ್ಲೆಯ ಲಕ್ಷ್ಮೇಶ್ವರ ಮತ್ತು ಸೋಮೇಶ್ವರ ದೇವಸ್ಥಾನದಲ್ಲಿ ಉದ್ಯಾನವನದ ಕೆಲಸ. | 323299 |
| 10 | ಧಾರವಾಡ ಜಿಲ್ಲೆ ಕಲಘಟಗಿ ತಾಲ್ಲೂಕಿನ ಕಾಮಧೇನುವಿನಲ್ಲಿ ಕಲ್ಮೇಶ್ವರ ದೇವಸ್ಥಾನದ ಸಂರಕ್ಷಣೆ. | **752904** |

| | | |
|---|---|---|
| 11 | ಬಿಜಾಪುರ ಜಿಲ್ಲೆ, ಇಂಡಿ ತಾಲ್ಲೂಕಿನ ಹಿರೇಮಸಲಿಯಲ್ಲಿರುವ ದುರ್ಗಾದೇವಿ ದೇವಸ್ಥಾನದ ಸಂರಕ್ಷಣೆ. | **3500000** |
| 12 | ಹಾಸನ ಜಿಲ್ಲೆ, ಅರಕಲಗೂಡು ತಾಲ್ಲೂಕಿನ ಮಲ್ಲರಾಜಪಟ್ಟಣದಲ್ಲಿರುವ ಶ್ರೀ ಲಕ್ಷ್ಮಣೇಶ್ವರ ದೇವಸ್ಥಾನಕ್ಕೆ ರಕ್ಷಣಾ ಗೋಡೆಯನ್ನು ಒದಗಿಸುವ ಕೆಲಸ. | 2426703 |
| 13 | ಶಿವಮೊಗ್ಗ ಜಿಲ್ಲೆ. ಸೊರಬ ತಾಲ್ಲೂಕಿನ ನೀರಲಗಿಯಲ್ಲಿ ಶ್ರೀ ವೀರಭದ್ರಸ್ವಾಮಿ ದೇವಾಲಯದ ಸಂರಕ್ಷಣಾ ಕೆಲಸ. | 475797 |
| 14 | ಶಿವಮೊಗ್ಗ ಜಿಲ್ಲೆ. ಶಿವಮೊಗ ತಾಲ್ಲೂಕಿನ ಕುಸ್ಕೂರಿನಲ್ಲಿರುವ ಶ್ರೀ ಭೀಮೇಶ್ವರ ದೇವಸ್ಥಾನದ ಸಂರಕ್ಷಣೆ. | 431706 |
| 15 | **2021-22ನೇ ಸಾಲಿನ ಆಯವ್ಯ ಭಾಷಣ ಕಂಡಿಕೆ ಸಂಖ್ಯೆ (286)**<br>ಬಳ್ಳಾರಿ ಜಿಲ್ಲೆಯ ಸಂಗನಕಲ್ಲಿನಲ್ಲಿ ದೇಶದಲ್ಲಿಯೇ ಮೊದಲ ಪೂರ್ವ ಐತಿಹಾಸಿಕ ಯುಗದ ಅವಶೇಷಗಳ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ. ಬಿ.ಟಿ.ಪಿ.ಎಸ್ ಮತ್ತು ತೋರಣಗಲ್ಲು ನಡುವೆ ಇರುವ ನವಶಿಲಾಗಯಗದಿಂದ ಕಬ್ಬಿಣಯುಗದ ತಾಣ ಕುಡುತಿನಿ ಅಶ್ಮೆಂಡ್ ನ್ನು (ಬೂದಿ ದಿಬ್ಬ) ಐದು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು. | 5000000 |
| 16 | **2019-20ನೇ ಸಾಲಿನ ಆಯವ್ಯ ಭಾಷಣ ಕಂಡಿಕೆ ಸಂಖ್ಯೆ (253)**<br>ರಾಜ್ಯದಲ್ಲಿ 25,000ಕ್ಕೂ ಹೆಚ್ಚು ಐತಿಹಾಸಿಕ ಮಹತ್ವವುಳ್ಳ ದೇವಸ್ಥಾನಗಳು, ಪ್ರಾಚೀನ ಸ್ಥಳಗಳು, ಸ್ಮಾರಕಗಳಿದ್ದು ಇವುಗಳನ್ನು ಹಂತಹಂತವಾಗಿ ಸರ್ವೆ ಮತ್ತು ದಾಖಲೀಕರಣಗೊಳಿಸಲು "ಸಂರಕ್ಷಣಾ" ಯೋಜನೆ. | 4449980 |

ಲೆಕ್ಕಶೀರ್ಷಿಕೆ: 2205-00-103-0-25 **ಸಂಸ್ಕೃತಿ ಸಂಗ್ರಹಾಲಯ**

| ಕ್ರ.ಸಂ | ಕಾಮಗಾರಿಗಳ ವಿವರ | 2021-22ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| 1 | ಧಾರವಾಡ ನಗರದಲ್ಲಿ ಲಿಂಗಾಯತ ಭವನದ ಜೀರ್ಣೋದ್ಧಾರ ಹಾಗೂ ನವೀಕರಿಸುವುದು. | 1472992 |

ಲೆಕ್ಕಶೀರ್ಷಿಕೆ: 2205-00-107-0-01 **ಸರ್ಕಾರಿ ವಸ್ತು ಸಂಗ್ರಹಾಲಯಗಳು**

| ಕ್ರ.ಸಂ | ಕಾಮಗಾರಿಗಳ ವಿವರ | 2021-22ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| 1 | ಬಳ್ಳಾರಿ ಜಿಲ್ಲೆ ಹೂವಿನಡಗಲಿ ತಾಲ್ಲೂಕಿನ ಹೂವಿನಡಗಲಿಯಲ್ಲಿ ಸರ್ಕಾರಿ ವಸ್ತುಸಂಗ್ರಹಾಲಯದ ಅಭಿವೃದ್ಧಿ ಕಾಮಗಾರಿ. | 48645 |
| 2 | ಬೆಳಗಾವಿ ಜಿಲ್ಲೆ, ಕಿತ್ತೂರು ತಾಲ್ಲೂಕಿನ ಕಿತ್ತೂರಿನಲ್ಲಿರುವ ಕಿತ್ತೂರು ರಾಣಿ ಚನ್ನಮ್ಮ ಸರ್ಕಾರಿ ವಸ್ತುಸಂಗ್ರಹಾಲಯಕ್ಕೆ ಉದ್ಯಾನದ ನಿರ್ವಹಣೆ. | 398241 |
| 3 | ಚಿತ್ರದುರ್ಗದ ಸರ್ಕಾರಿ ವಸ್ತುಸಂಗ್ರಹಾಲಯಗಳ ಆವರಣದಲ್ಲಿ ಉದ್ಯಾನವನದ ನಿರ್ವಹಣೆ. | 168582 |
| 4 | ಶಿವಪ್ಪ ನಾಯಕ ಅರಮನೆ ಆವರಣದ ಉದ್ಯಾನವನದ ನಿರ್ವಹಣೆ. | 193250 |
| 5 | ಮೈಸೂರಿನ ಆಯುಕ್ತರ ಕಛೇರಿಯಲ್ಲಿ ಉದ್ಯಾನವನದ ನಿರ್ವಹಣೆ. | 261556 |
| 6 | ಶ್ರೀರಂಗಪಟ್ಟಣದಲ್ಲಿರುವ ಶ್ರೀ ಚಾಮರಾಜೇಂದ್ರ ಸರ್ಕಾರಿ ವಸ್ತುಸಂಗ್ರಹಾಲಯಕ್ಕೆ ಯುಪಿಎಸ್ ಅಳವಡಿಸುವ ಕೆಲಸ. | 48605 |
| 7 | ಚಿತ್ರದುರ್ಗ ಜಿಲ್ಲೆ, ತಮಟಕಲ್ಲು ಗ್ರಾಮದಲ್ಲಿರುವ ಶಾಸನಕ್ಕೆ ಪೀಠವನ್ನು ಅಳವಡಿಸುವ | 98021 |

| | | |
|---|---|---|
| | ಕೆಲಸ. | |
| 8 | ವೆಂಕಟಪ್ಪ ಆರ್ಟ್ ಗ್ಯಾಲರಿಯಲ್ಲಿನ ಆರ್ಟ್‌ವರ್ಕ್‌ಗಳು ಮತ್ತು ಸರ್ಕಾರಿ ರಾಜ್ಯ ವಸ್ತುಸಂಗ್ರಹಾಲಯದಲ್ಲಿರುವ ಚಿತ್ರಕಲೆ ಸಂರಕ್ಷಣೆ ( ಇಂಟ್ಯಾಕ್ ಮೂಲಕ). | 716104 |
| 9 | ಮೈಸೂರಿನ ಆಯುಕ್ತರ ಕಛೇರಿಯಲ್ಲಿ ಸಿಸಿಟಿವಿ ದುರಸ್ಥಿ. | 5074 |
| 10 | ವೆಲ್ಲಿಂಗ್ಟನ್ ಮ್ಯೂಸಿಯಂನಲ್ಲಿ ಸಿಸಿಟಿವಿ ಮತ್ತು ದಿವಾನ್ ಪೂರ್ಣಯ್ಯ ಮ್ಯೂಸಿಯಂನಲ್ಲಿ ಸಿಸಿಟಿವಿ ದುರಸ್ಥಿ. | 13452 |
| 11 | ಬೆಂಗಳೂರು ನಗರದಲ್ಲಿ ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ವೆಂಕಟಪ್ಪ ಆರ್ಟ್ ಗ್ಯಾಲರಿಗಾಗಿ ಗಾರ್ಡನ್ ನಿರ್ವಹಣೆ. | 215301 |
| 12 | ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ವೆಲ್ಲಿಂಗ್ ಟನ್ ಭವನದಲ್ಲಿ ಕಲಾಕೃತಿಗಳಿಗೆ ಪೆಡಸ್ಟಲ್ ನಿರ್ಮಾಣ | 195860 |
| 13 | ಚಾಮರಾಜನಗರ ಜಿಲ್ಲೆ, ಯಳಂದೂರು ತಾಲ್ಲೂಕಿನ ಯಳಂದೂರಿನಲ್ಲಿರುವ ದಿವಾನ್ ಪೂರ್ಣಯ್ಯ ವಸ್ತುಸಂಗ್ರಹಾಲಯದಲ್ಲಿ ವಿದ್ಯುತ್ ಕಾಮಗಾರಿ. | 35342 |
| 14 | ಆಯುಕ್ತರ ಕಛೇರಿ, ಪುರಾತತ್ವ ಸಂರಕ್ಷಣಾ ಇಲಾಖೆ ಮತ್ತು ಪರಂಪರೆ ಇಲಾಖೆಗೆ ಇ-ಕಚೇರಿ ಅನುಷ್ಠಾನಕ್ಕೆ ನೆಟ್ ವರ್ಕಿಂಗ್ ಕೆಲಸ. | 91214 |
| 15 | ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಕೇಂದ್ರ ಕಛೇರಿಯ ಆಯುಕ್ತರ ಕೊಠಡಿಯ ಎಲ್.ಇ.ಡಿ ಪ್ಯಾನಲ್ ಗಳ, ರೆಕಾರ್ಡ್ ರೂಮ್ ಒಳಭಾಗ ಮತ್ತು ಕಛೇರಿ ಆವರಣದ ಒಳಭಾಗದ ಕಾರಿಡಾರ್, ವಾಲ್ ಮೌಂಟ್ ಎಲ್.ಇ.ಡಿ ಲೈಟ್, ಕಛೇರಿಯ ಇನ್ನಿತರ ವಿಭಾಗಗಳಿಗೆ ಎಲ್.ಇ.ಡಿ ಟ್ಯೂಬ್ ಸೆಟ್ ಸರಬರಾಜು ಮಾಡಿ ಅಳವಡಿಸುವ ಕೆಲಸ. | 99736 |
| 16 | ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಕೇಂದ್ರ ಕಛೇರಿಯ ಆವರಣದಲ್ಲಿರುವ ಸೋಲಾರ್ ಸ್ಟ್ರೀಟ್ ಲೈಟ್ ಸರಬರಾಜು ಹಾಗೂ ಪೋಲ್ ಗಳ ದುರಸ್ಥಿ ಮಾಡಿ ಅಳವಡಿಸುವ ಕೆಲಸ. | 94164 |
| 17 | ಮೈಸೂರು ಕೇಂದ್ರ ಕಛೇರಿಯ ರೆಕಾರ್ಡ್ ರೂಮ್ ಗೆ ಸೋಲಾರ್ ಯು.ಪಿ.ಎಸ್ (ಇನ್ ವೇಟರ್ ಹಾಗೂ ಬ್ಯಾಟರಿ) ಮಂಗನಿಂದ ಮಾನವ ವಿಗ್ರಹಗಳಿಗೆ ಎಲ್.ಇ.ಡಿ ಸ್ಪಾಟ್ ಲೈಟಿಂಗ್ ಹಾಗೂ ವೈರಿಂಗ್, ಎಂ.ಸಿ.ಬಿ ಗಳ ಸರಬರಾಜು ಮತ್ತು ಅಳವಡಿಸಿ, ಪರಂಪರೆ ಇಂಜಿನಿಯರ್ ರವರ ರೂಮ್ ಗೆ ಫ್ಯಾನ್ ಎ.ಸಿ ರಿಮೋಟ್ ಹಾಗೂ ಸ್ವೀಚ್ ಗಳ ದುರಸ್ಥಿ ಇನ್ನಿತರೆ ಕಛೇರಿಯ ವೈರಿಂಗ್ ದುರಸ್ಥಿ ಕೆಲಸ. | 52364 |
| 18 | ಬೀದರ್ ಜಿಲ್ಲೆ, ಬಸವಕಲ್ಯಾಣ ಸರ್ಕಾರಿ ವಸ್ತುಸಂಗ್ರಹಾಲಯ ಕಟ್ಟಡಕ್ಕೆ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಗಳು (ಭದ್ರತಾ ಕೊಠಡಿ) . | 323896 |
| 19 | ರಾಯಚೂರು ಜಿಲ್ಲೆ, ರಾಯಚೂರು ನಗರ ಸರ್ಕಾರಿ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಣೆ ಮತ್ತು ಅಭಿವೃದ್ಧಿ ಕಾರ್ಯಗಳು. | 351861 |
| 20 | ಯಳಂದೂರು, ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆಯಲ್ಲಿರುವ ದಿವಾನ್ ಪೂರ್ಣಯ್ಯ ಸರಕಾರಿ ಮ್ಯೂಸಿಯಂ ಉದ್ಯಾನವನದ ನಿರ್ವಹಣೆ. | 82426 |

**ಲೆಕ್ಕಶೀರ್ಷಿಕೆ: 4202-04-101-0-02 139 ಪ್ರಧಾನ ಕಾಮಗಾರಿಗಳು**

| ಕ್ರ.ಸಂ | ಕಾಮಗಾರಿಗಳ ವಿವರ | 2021-22ನೇ ಸಾಲಿನ ವೆಚ್ಚ ರೂ.ಗಳಲ್ಲಿ |
|---|---|---|
| 1 | ಹಾಸನ ಜಿಲ್ಲೆಯ ಹಂದನಕೆರೆಯಲ್ಲಿ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ಸಂರಕ್ಷಣೆ. | 1749480 |

| | | |
|---|---|---|
| 2 | ಬೆಂಗಳೂರು ನಗರ, ಬೆಂಗಳೂರು ನಗರದ ಕಲಾಸಿಪಾಳ್ಯದಲ್ಲಿ ಪ್ರಾಚೀನ ಐತಿಹಾಸಿಕ ಶಸ್ತ್ರಾಗಾರದ ಸಂರಕ್ಷಣೆ. | 1000000 |
| 3 | ಕಳಸಾಪುರ ಗ್ರಾಮ, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ ಶ್ರೀ ಕಟ್ಟೆ ಶಿವಾಲಯ ದೇವಸ್ಥಾನದ ಸಂರಕ್ಷಣೆ. | 1980534 |
| 4 | ಮೈಸೂರು, ತರೀಕೆರೆ ತಾಲ್ಲೂಕಿನ ಸೋಂಪುರ ಗ್ರಾಮದಲ್ಲಿ ಶ್ರೀ ಪ್ರಸನ್ನ ಸೋಮೇಶ್ವರ ದೇವಾಲಯದ ಸಂರಕ್ಷಣೆ. | 3500000 |
| 5 | ಮೈಸೂರಿನ ಇರ್ವಿನ್ ರಸ್ತೆಯ ವೆಲ್ಲಿಂಗ್‌ಟನ್ ಭವನದಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯ ಕಟ್ಟಡ ಮ್ಯೂಸಿಯಂ ಮೌಲ್ಯಮಾಪನದ ವರದಿ ಸೇವೆಯ ಸಂರಕ್ಷಣೆ. | 99500 |
| 6 | ಹಾಸನ ಜಿಲ್ಲೆ, ಹಾಸನದಲ್ಲಿ ಹೊಸ ಮ್ಯೂಸಿಯಂ ಸುತ್ತಲೂ ಪೀಠದ ನಿರ್ಮಾಣ ಮೊತ್ತ ಹಾಗೂ ಇನ್ನಿತರ ಅಭಿವೃದ್ಧಿ ಕೆಲಸ | 692794 |
| 7 | ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಕೆರೆಸಂತೆಯಲ್ಲಿರುವ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಸ್ಥಾನದ ಸಂರಕ್ಷಣೆ. | 2362035 |
| 8 | ಬೆಂಗಳೂರು ನಗರ, ಬೆಂಗಳೂರು ನಗರದ ಕಲಾಸಿಪಾಳ್ಯದಲ್ಲಿ (ಮದ್ದಿನಮನೆ ಮತ್ತು ಪ್ರಾಚೀನ ಐತಿಹಾಸಿಕ ಶಸ್ತ್ರಾಗಾರದ) ಸಂರಕ್ಷಣೆ. | 1000000 |

**11. ಇಲಾಖೆಯ ಪರಂಪರೆ ವಿಭಾಗದ ವತಿಯಿಂದ 6 ಪಾರಂಪರಿಕ ನಡಿಗೆಗಳನ್ನು ಆಯೋಜಿಸಲಾಗಿದೆ. ಸದರಿ ಪಾರಂಪರಿಕ ನಡಿಗೆಗಳಲ್ಲಿ ಒಟ್ಟು 253 ಜನ ಆಸಕ್ತರು/ಪ್ರಶಿಕ್ಷಣಾರ್ಥಿಗಳು/ಸಾರ್ವಜನಿಕರು ಭಾಗವಹಿಸಿದ್ದರು.**

**12. ಮಾಹಿತಿ ಹಕ್ಕು ಅಧಿನಿಯಮ:**

2021-22ನೇ ಸಾಲಿನಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾದ ಅರ್ಜಿಗಳ ವಿವರ

| ವರ್ಷ | ನೇರವಾಗಿ ಸ್ವೀಕೃತವಾದ ಅರ್ಜಿಗಳು | ಸರ್ಕಾರದಿಂದ ವರ್ಗಾಹಿಸಿರುವ ಅರ್ಜಿಗಳು | ಅಧೀನ ಕಛೇರಿಯಿಂದ ವರ್ಗಾಹಿಸಿದ ಅರ್ಜಿಗಳು | ಅಧೀನ ಕಛೇರಿಯಲ್ಲಿ ನೇರವಾಗಿ ಮಾಹಿತಿ ನೀಡಿರುವ ಪತ್ರದ ಪ್ರತಿಗಳು | ಒಟ್ಟು ಸ್ವೀಕೃತವಾದ ಅರ್ಜಿಗಳು |
|---|---|---|---|---|---|
| ಏಪ್ರಿಲ್ 2021 ರಿಂದ ಫೆಬ್ರುವರಿ 2022 | 63 | 26 | 8 | 8 | 63 |

**13. ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಸ್ಮಾರಕಗಳ ಸಂರಕ್ಷಣೆ**

- ಸರ್ಕಾರಿ ಆದೇಶ ಸಂಖ್ಯೆ: ಸಂಕಇ 97 ಕೆಎಂಯು 2001, ದಿನಾಂಕ 19/11/2001ರನ್ವಯ 2002-03ನೇ ಸಾಲಿನಿಂದ ಸಾರ್ವಜನಿಕ ಸಹಭಾಗಿತ್ವ ಯೋಜನೆಯಡಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಹಯೋಗದೊಡನೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್‌ವತಿಯಿಂದ ಸ್ಮಾರಕಗಳ ಸಂರಕ್ಷಣೆಯನ್ನು ಕೈಗೊಂಡು ಬರಲಾಗುತ್ತಿದೆ. ಈ ಯೋಜನೆಯಡಿ ಅಂದಾಜುವೆಚ್ಚ 40:40:20 ಅನುಪಾತದಲ್ಲಿ (ಸರ್ಕಾರ:ಖಾಸಗಿ: ಸಾರ್ವಜನಿಕ) ಭರಿಸಲಾಗುತ್ತಿದೆ.

- ಈ ಯೋಜನೆಯಡಿ 2021-22 ನೇ ಸಾಲಿನಲ್ಲಿ 12 ಸಂರಕ್ಷಣಾ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆಯನ್ನು ಪಡೆದು ನಿಯಮಾನುಸಾರ ರೂ.51.50 ಲಕ್ಷಗಳ ಮೊದಲನೇಯ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಿದೆ.

- **ಅರಕ್ಷಿತ ಸ್ಮಾರಕಗಳ ಸರ್ವೇ:-**

  2021-22ನೇ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ರೂ.50.00ಲಕ್ಷಗಳ ಅನುದಾನವನ್ನು ರಾಜ್ಯ ಕ್ರಿಯಾಯೋಜನೆಯಲ್ಲಿ ನಿಗದಿಪಡಿಸಿಕೊಂಡಿದ್ದು, ಇಲಾಖೆಯ ಸಿಬ್ಬಂದಿಗಳ ಮೂಲಕ 13 ತಾಲ್ಲೂಕು (ನಂಜನಗೂಡು, ಟಿ.ನರಸೀಪುರ, ಶ್ರೀರಂಗಪಟ್ಟಣ, ಹಾಸನ ಜಿಲ್ಲೆಯ ಹಾಲೂರು, ಮಂಗಳೂರು, ಮಡಿಕೇರಿ, ಬೆಂಗಳೂರು ನಗರ, ಹಿರಿಯೂರು, ರಾಯಚೂರು, ವಿಜಯಪುರ ಜಿಲ್ಲೆಯ ಕೊಟ್ಟೂರು, ಕಲಬುರಗಿ ಜಿಲ್ಲೆಯ ಕಮಲಾಪುರ, ಹಾವೇರಿಯ ಸವಣೂರು, ಬೈಲಹೊಂಗಲ) ಗಳಲ್ಲಿ ಗ್ರಾಮವಾರು ಸಮೀಕ್ಷೆಯ ಮೂಲಕ ಸರ್ವೇ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

- **ಸಂರಕ್ಷಿತ ಸ್ಮಾರಕಗಳ ಡಿಜಿಟಲ್ ದಾಖಲೀಕರಣ:-**

  2021-22 ನೇ ಸಾಲಿನಲ್ಲಿ ಕಲಬುರಗಿ ವಿಭಾಗದ 249 ಸ್ಮಾರಕಗಳ 3ಡಿ ಮ್ಯಾಪಿಂಗ್ ಮತ್ತು ಲೇಸರ್ ಸ್ಕ್ಯಾನಿಂಗ್ ಕಾರ್ಯವು ಪೂರ್ಣಗೊಂಡಿದೆ.

### ಸಂಗನಕಲ್ಲು ಪ್ರಾಗೈತಿಹಾಸಿಕ ನೆಲೆಗಳ ಮತ್ತು ವಸ್ತುಸಂಗ್ರಹಾಲಯ ಅಭಿವೃದ್ಧಿ.

- 2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿನ ಕಂಡಿಕೆ (286)ರಲ್ಲಿ ಬಳ್ಳಾರಿ ಜಿಲ್ಲೆಯ ಸಂಗನಕಲ್ಲಿನಲ್ಲಿ ದೇಶದಲ್ಲಿಯೇ ಮೊದಲ ಪೂರ್ವ ಐತಿಹಾಸಿಕ ಯುಗದ ಅವಶೇಷಗಳ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಲಾಗಿದೆ. ಬಿ.ಟಿ.ಪಿ.ಎಸ್ ಮತ್ತು ತೋರಣಗಲ್ಲು ನಡುವೆ ಇರುವ ನವ ಶಿಲಾಯುಗದಿಂದ ಕಬ್ಬಿಣಯುಗದ ತಾಣ ಕುಡುತಿನಿ ಆಶ್ ಮೌಂಡ್ ನ್ನು (ಬೂದಿ ದಿಬ್ಬ) ಐದು ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು. ಈ ಉದ್ದೇಶಕ್ಕಾಗಿ ಪ್ರಸಕ್ತ ಸಾಲಿನಲ್ಲಿ ಎರಡು ಕೋಟಿ ರೂ.ಗಳನ್ನು ಒದಗಿಸಲಾಗುವುದು ಎಂಬುದಾಗಿ ಘೋಷಣೆಯಾಗಿರುತ್ತದೆ.

- ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕಿನ ಸಂಗನಕಲ್ಲು, ಸಿರಿವಾರ ಮತ್ತು ಕಪ್ಪಗಲ್ಲು, ಗ್ರಾಮಗಳಲ್ಲಿರುವ ಪ್ರಾಗೈತಿಹಾಸಿಕ ನೆಲೆಗಳು/ಗುಡ್ಡಗಳಾದ ಸಣ್ಣ ರಾಚಮ್ಮನ ಗುಡ್ಡ, ಚೌಡಮ್ಮನ ಗುಡ್ಡ, ಹಿರೇಗುಡ್ಡ ಹಾಗೂ ಗಯಾಳು ಗುಡ್ಡ ಇವುಗಳನ್ನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳು ಮತ್ತು ಅವಷೇಶಗಳ ಅಧಿನಿಯಮ 1961ರ ಕಲಂ4(3) ರಡಿ ರಾಜ್ಯ ಸಂರಕ್ಷಿತ ಸ್ಮಾರಕವೆಂಬುದಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಕಸಂವಾಪ್ರ/ 03/ ಕೆಎಂಯು/ 2008(ಭಾ), ದಿನಾಂಕ:01.02.2012ರಲ್ಲಿ ಘೋಷಣೆಯಾಗಿರುತ್ತದೆ. ಈ ಘೋಷಣೆ ಸರ್ಕಾರದ ತಾತ್ವಿಕ ಅನುಮೋದನೆಯನ್ನು ನೀಡಲಾಗಿದೆ.

- ಮುಂದುವರೆದು ಈ ಯೋಜನೆಯ ಅನುಷ್ಠಾನವನ್ನು ಪ್ರವಾಸೋದ್ಯಮ ಇಲಾಖೆಯಲ್ಲಿನ ಕರ್ನಾಟಕ ಮೂಲಭೂತ ಸೌಕರ್ಯ ಹಾಗೂ ಅಭಿವೃದ್ಧಿ ನಿಗಮದ ವತಿಯಿಂದ ಕೈಗೊಳ್ಳಲು ಸರ್ಕಾರದ ಆದೇಶ ಸಂಖ್ಯೆ:ಟಿಓಆರ್ 83 ಟಿಡಿಪಿ 2021 ಬೆಂಗಳೂರು ದಿನಾಂಕ:06.09.2021 ರಲ್ಲಿ ಮಂಜೂರಾತಿಯಾಗಿದ್ದು, ಅದರಂತೆ ಅನುಷ್ಠಾನಗೊಳಿಸಲು ಈ ಯೋಜನೆಗೆ ರೂ.50.00 ಲಕ್ಷಗಳ ಅನುದಾನವನ್ನು ಮೊದಲನೇ ಕಂತಾಗಿ ಬಿಡುಗಡೆಗೊಳಿಸಲಾಗಿದೆ.

## 14. ವಿಶ್ವ ಪರಂಪರೆ ಅಂತಿಮ ಪಟ್ಟಿಗೆ ಸೇರ್ಪಡೆ ಕುರಿತು.

**Sacred Ensembles of the Hoysala (Hoysala Architecture series including Belur, Halebidu, Somanathapur)** : ತಾಣವನ್ನು ವಿಶ್ವ ಪರಂಪರೆ ಅಂತಿಮ ಪಟ್ಟಿ ಸೇರ್ಪಡೆಗೆ ಡೋಸಿಯರ್ ಮತ್ತು ಸೈಟ್ ಮ್ಯಾನೇಜ್‌ಮೆಂಟ್ ಪ್ಲಾನ್‌ನ್ನು ಇನ್‌ಟ್ಯಾಕ್ ಸಂಸ್ಥೆಯ ಮೂಲಕ ರೂ.82.00ಲಕ್ಷಗಳ ಸಿದ್ಧಪಡಿಸಿ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಮುಖಾಂತರ ವಿಶ್ವಪರಂಪರೆ ಪಟ್ಟಿಯ ಆಯ್ಕೆ ಸಮಿತಿಯ ಪರಿಶೀಲನೆಗೆ ಜನವರಿ 2021ರಲ್ಲಿ ಸಲ್ಲಿಸಲಾಗಿದ್ದು, ಈ ಡೋಸಿಯರ್ ಅನ್ನು ಪರಿಶೀಲಿಸಿ, ಕೇಂದ್ರ ಸಂಸ್ಕೃತಿ ಮಂತ್ರಾಲಯವು ದಿನಾಂಕ:31.01.2022ರಂದು ಯುನೆಸ್ಕೋ ಸಮಿತಿಗೆ ಸಲ್ಲಿಸಿದ್ದು, 2022-23ನೇ ಸಾಲಿಗೆ ವಿಶ್ವಪರಂಪರೆ ಪಟ್ಟಿಗೆ ಪರಿಗಣಿಸಲಿದೆ.

## 15. ಬಾಹ್ಯ ಸಂಸ್ಥೆಯ ಮೂಲಕ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿರುವುದು:-

ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಸಂರಕ್ಷಿತ ಸ್ಮಾರಕಗಳಿಗೆ ಹಾಗೂ ವಸ್ತುಸಂಗ್ರಹಾಲಯಗಳಿಗೆ ಭದ್ರತಾ ಸಿಬ್ಬಂದಿಯನ್ನು KTTP ನಿಯಮಾನುಸಾರ ಟೆಂಡರ್ ಕರೆದು ಬಾಹ್ಯ ಸಂಸ್ಥೆಯ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ. ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಕಛೇರಿ ಕೆಲಸ ಕಾರ್ಯಗಳಿಗೆ ನಿಯಮಾನುಸಾರ ಈ ಕೆಳಕಂಡ ಸಿಬ್ಬಂದಿಗಳ ಸೇವೆಯನ್ನು ಬಾಹ್ಯ ಸಂಸ್ಥೆಯ ಮೂಲಕ ಪಡೆಯಲಾಗುತ್ತಿದೆ.

| ಕ್ರ.ಸಂ | ಬಾಹ್ಯ ಮೂಲದಿಂದ ಪಡೆದ ಸಿಬ್ಬಂದಿಯ ಪದನಾಮ | ವೃಂದ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಪುರಾತತ್ವ ಸಂರಕ್ಷಣಾ ಸಹಾಯಕರು | ಸಿ | 01 |
| 2 | ದ್ವಿತೀಯ ದರ್ಜೆ ಸಹಾಯಕರು | ಸಿ | 05 |
| 3 | ಹಿರಿಯ ಬೆರಳಚ್ಚುಗಾರರು/ ಬೆರಳಚ್ಚುಗಾರರು | ಸಿ | 03 |
| 4 | ವಾಹನ ಚಾಲಕರು | ಸಿ | 02 |
| 5 | ಗ್ರೂಪ್-ಡಿ | ಡಿ | 74 |
| | | ಒಟ್ಟು | **85** |

## 16. ಸಹಾಯಾನುದಾನ:

- **ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆ:**

2021-22ನೇ ಆರ್ಥಿಕ ಸಾಲಿನಲ್ಲಿ ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆಗೆ ರೂ.47.00ಲಕ್ಷವನ್ನು ಸರ್ಕಾರಿ ಆದೇಶದ ಮೇರೆಗೆ ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗಿದೆ.

- **ಸಹ್ಯಾದ್ರಿ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆ:**

2021-22ನೇ ಆರ್ಥಿಕ ಸಾಲಿನಲ್ಲಿ ಸಹ್ಯಾದ್ರಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆಗೆ ರೂ.32.00ಲಕ್ಷವನ್ನು ಸರ್ಕಾರಿ ಆದೇಶದ ಮೇರೆಗೆ ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗಿದೆ.

- **ಚಾಲುಕ್ಯ ಪಾರಂಪರಿಕ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆ:**

2021-22ನೇ ಆರ್ಥಿಕ ಸಾಲಿನಲ್ಲಿ ಚಾಲುಕ್ಯ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಕ್ರಮಕ್ಕೆ ರೂ.1.00ಲಕ್ಷಗಳನ್ನು ಸರ್ಕಾರಿ ಮಂಜೂರಾತಿ ಆದೇಶದನ್ವಯ ಬಿಡುಗಡೆ ಮಾಡಲಾಗಿದೆ.

- **ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ:**

2017-18ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ (225)ರಂತೆ, ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರ ಘೋಷಣೆಯಾಗಿದ್ದು, ಅದರಂತೆ ಪ್ರಾಧಿಕಾರದ ವಿಧೇಯಕಕ್ಕೆ ಅನುಮೋದನೆಯನ್ನು ಪಡೆದು ಸರ್ಕಾರಿ ಆದೇಶ ಸಂಖ್ಯೆ TOR 91 TDA 2020 22.12.2020ರನ್ವಯ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 2020 ರಚಿಸಿ ದಿನಾಂಕ: 21.12.2020 ರಿಂದ ಜಾರಿಗೊಳಿಸಲಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ: ಟಿ.ಓ.ಆರ್.91 ಟಿ.ಡಿ.ಎ 2020 ದಿನಾಂಕ: 14.02.2022ರ ರಿತ್ಯಾ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಕರಡು ನಿಯಮಗಳು, 2021ನ್ನು ದಿನಾಂಕ: 07.02.2022 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

### 17. ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಕಛೇರಿವಾರು ಬಾಕಿ ಇರುವ ಕಂಡಿಕೆಗಳ ವರದಿ:

ಈ ಇಲಾಖೆಯಲ್ಲಿ ಪ್ರಸ್ತುತ 41 ಆಡಿಟ್ ಪ್ಯಾರಾಗಳು ಬಾಕಿ ಇವೆ. ಈ ಆಡಿಟ್ ಪ್ಯಾರಾಗಳಿಗೆ ಕಂಡಿಕೆವಾರು ಉತ್ತರವನ್ನು ನೀಡಲಾಗಿದೆ. 2020-21ನೇ ಸಾಲಿನವರೆಗೆ ಇಲಾಖೆಯ ಲೆಕ್ಕಪರಿಶೋಧನೆ ಪೂರ್ಣಗೊಂಡಿರುತ್ತದೆ.

### 18. ಇಲಾಖೆಯ ವೆಬ್‌ಸೈಟ್:

ಇಲಾಖೆಯ ವೆಬ್‌ಸೈಟ್‌ನಲ್ಲಿ (https://archaeology.karnataka.gov.in) ಇಲಾಖೆಯ ಇತಿಹಾಸ, ಇಲಾಖೆಯ ಪ್ರಮುಖ ಚಟುವಟಿಕೆಗಳು ಹಾಗೂ ಸಾಧಿಸಿದ ಪ್ರಗತಿಯ ವಿವರಗಳು, ವಾರ್ಷಿಕ ವರದಿಗಳು, ಇಲಾಖೆಯ ಅಧಿನಿಯಮ ಮತ್ತು ಉಪ ನಿಯಮಗಳ ವಿವರ, ಇಲಾಖೆಯ ಪ್ರಕಟಣೆಯ ವಿವರಗಳು, ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿತ ಮಾಹಿತಿ ಹಕ್ಕು ಅಧಿನಿಯಮ 4 (1)ಎ ಮತ್ತು 4(1) ಬಿ, ಇಲಾಖೆಯ ಸಂರಕ್ಷಿತ ಸ್ಮಾರಕಗಳ ನಿರ್ದೇಶಿಕೆ ಮತ್ತು ಈ ಸ್ಮಾರಕಗಳ ಸಂಕ್ಷಿಪ್ತ ವಿವರಗಳನ್ನೊಳಗೊಂಡ ಮಾಹಿತಿ, ಇಲಾಖೆಯ ಪ್ರಮುಖ ವಿದ್ಯಮಾನಗಳು (News & Events), ಟೆಂಡರ್‌ಗಳ ಕುರಿತು ಮಾಹಿತಿ, ಸಾರ್ವಜನಿಕ ಕುಂದುಕೊರತೆ ಮತ್ತು ಮಾಹಿತಿಗಾಗಿ ಸಲ್ಲಿಸಬಹುದಾಗಿದೆ.

### 19. ಇಲಾಖೆಯ ಗ್ರಂಥಾಲಯ:-

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಮೈಸೂರಿನ ಅರಮನೆಯ ಆವರಣದಲ್ಲಿ ಒಂದು ಗ್ರಂಥಾಲಯವಿದ್ದು, ಈ ಗ್ರಂಥಾಲಯದಲ್ಲಿ ಪುರಾತತ್ವ, ಇತಿಹಾಸ ವಿಷಯಗಳ ಕುರಿತಂತೆ ಒಂದು ಪುಸ್ತಕ ಬಂಡಾರವಿದ್ದು, ಸುಮಾರು 18,398 ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಈ ಗ್ರಂಥಾಲಯಕ್ಕೆ ಬರುವ ವಿದ್ವಾಂಸರಿಗೆ, ಸಂಶೋಧಕರಿಗೆ ಮತ್ತು ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಆಸಕ್ತರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ.

### 20. 2020-21ನೇ ಸಾಲಿನಲ್ಲಿ ವಿಧಾನಸಭೆ/ ವಿಧಾನ ಪರಿಷತ್/ ಭರವಸೆ/ ಲೋಕಸಭಾ ಪ್ರಶ್ನೆ ಇವುಗಳಿಗೆ ಸಂಬಂಧಿಸಿದ ವಿವರಗಳು:

| ಕ್ರ.ಸಂ | ವಿಷಯ | ವಿಧಾನ ಸಭೆ | ವಿಧಾನ ಪರಿಷತ್ | ಗಮನ ಸೆಳೆಯುವ ಸೂಚನೆಗಳು | ಭರವಸೆ | | ಲೋಕಸಭೆ | ರಾಜ್ಯಸಭೆ |
|---|---|---|---|---|---|---|---|---|
| | | | | | ವಿಧಾನ ಸಭೆ | ವಿಧಾನ ಪರಿಷತ್ | | |
| 1) | ಆಡಳಿತಾತ್ಮಕ | 31 | 23 | 00 | 00 | 00 | 00 | 00 |

| | ವಿಷಯಗಳು | | | | | | | |
|---|---|---|---|---|---|---|---|---|
| 2) | ವಸ್ತು ಸಂಗ್ರಹಾಲಯ ಕುರಿತಂತೆ | 00 | 00 | 00 | 00 | 00 | 00 | 00 |
| 3) | ಸಂರಕ್ಷಣಾ ವಿಷಯಗಳು | 14 | 16 | 08 | 00 | 00 | - | -- |
| 4) | ಪರಂಪರೆ ವಿಭಾಗ | 01 | 01 | - | 01 | - | - | - |
| 5) | ಆಯವ್ಯಯ ವಿಭಾಗ | 26 | - | - | - | - | - | - |
| | **ಒಟ್ಟು** | **72** | **40** | **08** | **01** | **00** | **00** | **00** |

## 21. ಇಲಾಖೆಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಪಡೆದ ತರಬೇತಿಗಳ ವಿವರಗಳು:

2021-22ನೇ ಸಾಲಿನಲ್ಲಿ ತರಬೇತಿ ಮತ್ತು ಕಾರ್ಯಗಾರಗಳಲ್ಲಿ ಭಾಗವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರ ಇಂತಿವೆ.

| ಕ್ರ.ಸಂ | ತರಬೇತಿ/ಕಾರ್ಯಗಾರದ ವಿಷಯ | ನಿಯೋಜಿಸಿರುವ ಅಧಿಕಾರಿಗಳ ಸಂಖ್ಯೆ | ನಿಯೋಜಿಸಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|
| 1 | Nomination of officers for one day workshop on GeM on 19.11.2021-reg | 01 | -- |

## 22. ತಾಂತ್ರಿಕ ಸಲಹಾ ಸಮಿತಿ :-

ಇಲಾಖೆಯ ಸಂರಕ್ಷಣಾ ಕಾಮಗಾರಿಗಳನ್ನು ಪರಿಶೀಲಿಸಿ ಸಲಹೆ ಮತ್ತು ಮಾರ್ಗದರ್ಶನ ನೀಡಲು ಈ ಕೆಳಕಂಡ ತಜ್ಞರನ್ನೊಳಗೊಂಡ ತಾಂತ್ರಿಕ ಸಲಹಾ ಸಮಿತಿಯನ್ನು ಸರ್ಕಾರದ ಆದೇಶದ ಸಂಖ್ಯೆ: ಟಿಓಆರ್ 91 ಟಿಡಿಎ 2021 ದಿನಾಂಕ:08.11.2021ರನ್ವಯ ದಿನಾಂಕ:01.07.2021ರಿಂದ 31.07.2024ರವರೆಗೆ ಮೂರು ವರ್ಷಗಳ ಅವಧಿಗೆ ಮುಂದುವರೆಸಲಾಗಿದೆ.

* ಶ್ರೀ ಬಿ.ಅಶ್ವತ್ಥನಾರಾಯಣ, ನಿವೃತ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
* ಶ್ರೀ ಹ.ಮ.ಸಿದ್ದನಗೌಡರ್, ನಿವೃತ್ತ ನಿರ್ದೇಶಕರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಬೆಂಗಳೂರು.
* ಶ್ರೀ ರಂಗನಾಥ್, ನಿವೃತ್ತ ಉಪ ಪುರಾತತ್ವ ಅಧೀಕ್ಷಕ ಇಂಜಿನಿಯರ್, ಭಾರತೀಯ ಪುರಾತತ್ವ ಸರ್ವೇಕ್ಷಣಾ. ಬೆಂಗಳೂರು.
* ಶ್ರೀಮತಿ ಸ್ವಪ್ನ ಎಸ್., ಪ್ರಾಂಶುಪಾಲರು, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಅಡ್ಮಿನಿಸ್ಟ್ರೇಟಿವ್ ಅಂಡ್ ಅಕಾಡೆಮಿಕ್ ಹೆಡ್ ಅಫ್ ಇನ್ಸ್ ಟ್ಯೂಷನ್. ಬೆಂಗಳೂರು.
* ಡಾ.ರಾಜಸಿಂಹ ಹೆಚ್., ತಾಂತ್ರಿಕ ಸಲಹೆಗಾರರು, ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಯಮಿತ (ಕೆ.ಟಿ.ಐ.ಎಲ್), ಬೆಂಗಳೂರು.

## 23. ರಾಜ್ಯ ಸಂರಕ್ಷಿತ ಸ್ಮಾರಕ;

ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಓಆರ್ 94 ಟಿಡಿಎ 2020 ದಿನಾಂಕ:07.12.2021ರನ್ವಯ ಈ ಕೆಳಕಂಡ 06 ಸ್ಮಾರಕಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲಾಗಿದೆ.

| ಕ್ರ ಸಂ | ಜಿಲ್ಲೆ | ತಾಲ್ಲೂಕು | ಸ್ಥಳ | ರಾಜ್ಯದ ಸ್ಮಾರಕಗಳು/ನೆಲೆಗಳು |
|---|---|---|---|---|
| 1 | ಚಾಮರಾಜನಗರ | ಗುಂಡ್ಲುಪೇಟೆ | ಹಂಗಳ | ವರದರಾಜ ದೇವಾಲಯ |
| 2 | " | " | ಗುಂಡ್ಲುಪೇಟೆ | ರಾಮೇಶ್ವರ ದೇವಾಲಯ |
| 3 | " | " | ವಿಜಯಪುರ (ಗುಂಡ್ಲುಪೇಟೆ) | ಶ್ರೀ ಪರವಾಸು ದೇವಾಲಯ |
| 4 | " | " | ತ್ರಿಯಂಬಕಪುರ | ಶ್ರೀ ತ್ರಿಯಂಬಕೇಶ್ವರ ದೇವಾಲಯ |
| 5 | " | ಯಳಂದೂರು | ಅಗರ ಗ್ರಾಮ | ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯ |
| 6 | " | ಕೊಳ್ಳೇಗಾಲ | ಚಿಲಕವಾಡಿ | ಶ್ರೀ ಶಂಭುಲಿಂಗೇಶ್ವರ ದೇವಾಲು |

## 24. ನಿವೃತ್ತಿ:

2021-22ನೇ ಸಾಲಿನಲ್ಲಿ ಗ್ರೂಪ್ ಬಿ ವೃಂದದ 01 ಅಧಿಕಾರಿ, ಗ್ರೂಪ್ ಸಿ ವೃಂದದ 01 ಸಿಬ್ಬಂದಿಗಳು ಹಾಗೂ ಗ್ರೂಪ್ 'ಡಿ' -02 ಸಿಬ್ಬಂದಿಗಳು ವಯೋಮಾನ ನಿವೃತ್ತಿಯನ್ನು ಹೊಂದಿರುತ್ತಾರೆ.

## 25. ನ್ಯಾಯಾಲಯದ ಪ್ರಕರಣಗಳ ವಿವರಗಳು:

| ಕ್ರ.ಸಂ | ನ್ಯಾಯಾಲಯದ ಪ್ರಕರಣಗಳು | 2020-21ನೇ ಸಾಲಿನಲ್ಲಿ ಬಾಕಿ ಇರುವ ಪ್ರಕರಣಗಳು | 2021-22ನೇ ಸಾಲಿನಲ್ಲಿ ದಾಖಲಾದ ಪ್ರಕರಣಗಳು | ಇತ್ಯರ್ಥವಾಗಿರುವ ಪ್ರಕರಣಗಳು | ಇತ್ಯರ್ಥ ಆಗಬೇಕಾದ ಪ್ರಕರಣಗಳು |
|---|---|---|---|---|---|
| 1 | ಸರ್ವೋಚ್ಚ ನ್ಯಾಯಾಲಯ, ನವದೆಹಲಿ (ಸುಪ್ರೀಮ್ ಕೋರ್ಟ್) | 02 | -- | -- | 02 |
| 2 | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಕಲಬುರಗಿ, ಧಾರವಾಡ (ಹೈಕೋರ್ಟ್) | 104 | 04 | 02 | 106 |
| 3 | ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು | 02 | -- | 02 | -- |
| 4 | ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯ | 13 | 03 | 03 | 13 |
| 5 | ಜಿಲ್ಲಾಧಿಕಾರಿಗಳ ನ್ಯಾಯಾಲಯ | 02 | -- | -- | 02 |
| | ಒಟ್ಟು | **123** | **07** | **07** | **123** |

ಈ ರೀತಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಾರ್ಯಚಟುವಟಿಕೆಗಳು ಮುಂದುವರಿಯುತ್ತಿವೆ.

ಪೂರ್ಣಿಮಾ.ಬಿ.ಆರ್., ಭಾ.ಆ.ಸೇ.
ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು.